ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿರುವ ಪ್ರಕಾರ ಈ ವಿಚಾರ ನಂಹಿತೆ ತಯಾರು ಆಗಿದೆ, ಒಪ್ಪಿಕೊಳ್ಳುವುದು, ಬಿಡುವುದು ಇನ್ನೂ ಯೋಚನೆಯಲ್ಲಿದೆ ಎಂದು ಅರ್ಥ ವಾಯಿತು. ಅದು ತಯಾರು ಆಗಿರುವುದರಿಂದ ಅದರ ಮುಖ್ಯ ಅಂಶಗಳು ಏನು, ರೂಪರೇಷೆಗಳು ಏನು? ಎನ್ನುವುದು ತಮಗೆ ಗೊತ್ತಿದೆ ಎಂದು ತಿಳಿದುಕೊಂಡಿದ್ದೇವೆ. ಆದ್ದರಿಂದ, ಅದರಲ್ಲಿ ಏನು ಇದೆ ಎಂದು ಹೇಳುವುದಾದರೆ, ನಮಗೂ ಸ್ವಲ್ಪ ಅನುಕೂಲವಾಗಬಹುದು ಎಂದು ಕಾಣುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಒಪ್ಪಿಕೊಳ್ಳುವುದು, ಬಿಡುವುದು ಎನ್ನುವ ಅನುಮಾನವಿಲ್ಲ, ಒಪ್ಪಿಕೊಳ್ಳುತ್ತೇವೆ; ನಮ್ಮ ಮಂತ್ರಿಮಂಡಲದವರು ಎಲ್ಲರೂ ಒಪ್ಪಿಕೊಳ್ಳುವವರು ಇದ್ದಾರೆ. ಏತನ್ಮಧ್ಯೆ ತಾವು ಏನಾದರೂ ಸಲಹೆಗಳಿದ್ದರೆ, ಕಳುಹಿಸಿಕೊಡಿ ಅದನ್ನು ಪರಿಶೀಲನೆ ಮಾಡೋಣ. ಎಲ್ಲಾ ಪರಿಶೀಲಿಸಿ ಒಪ್ಪಿಗೆಯಾದಮೇಲೆ ತಮ್ಮ ಮುಂದೆ ಬೇಕಾದರೆ ಇಡುತ್ತೇನೆ.

Sri D. B. KALMANKAR.—May I know how much time it will take for the Government to adopt the Code of Conduct ?

Sri D. DEVARAJ URS.—Very shortly we will finalise and adopt it.

Construction of a Bridge on Gubbi-Hebbur Road

621. Sri GATTI CHANDRASEKHAR (Gubbi).—

Will the Minister for Public Works and Electricity be pleased to state :—

(*a*) whether it has come to the notice of the Government that the hardship is being caused to travelling pub'ic for want of a bridge across left bank wasteweir of Gubbi Tank on Gubbi-Hebbur Road ;

(*b*) the reasons for not according sanction to the estimate prepared long back in this behalf so far ;

(*c*) whether the Government intend to take up and complete the construction of bridge work during this year ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The estimate is not prepared.

(*c*) It will be considered when the financial position improves.

ಶ್ರೀ ಗಟ್ಟಿ ಚಂದ್ರಶೇಖರ್.—ತಮ್ಮ ಉತ್ತರದಲ್ಲಿ ಸೇತುವೆಯ ಅವಶ್ಯಕತೆ ಇದೆಯೆಂದು ತಿಳಿಸಿದ್ದೀರಿ. ಮತ್ತು ಆ ಬಗ್ಗೆ, ಅಂದಾಜು ತಯಾರು ಆಗಿಲ್ಲ, ಹಣಕಾಸಿನ ಪರಿಸ್ಥಿತಿ ಉತ್ತಮ ಗೊಂಡಾಗ ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ನಾನು ಈ ಬಗ್ಗೆ 3-4 ಪ್ರಶ್ನೆಯನ್ನೂ ಕೇಳಿದರೂ ಯಾವ ಪ್ರಶ್ನೆಗೂ ನಿರ್ದಿಷ್ಟವಾದ ಉತ್ತರ ಬಂದಿಲ್ಲ. ಮಂತ್ರಿಗಳು ಸಹ ಈ ಸೇತುವೆಯನ್ನು ನೋಡಿದ್ದಾರೆ, ಕೋಡಿ ಬಿದ್ದಾಗ ಒಂದು ಫರ್ಲಾಂಗ್ ರಸ್ತೆ ಉದ್ದಕ್ಕೂ ಆ ಕಡೆ ಜನ ಈ ಕಡೆಗೆ ಈ ಕಡೆ ಜನ ಆ ಕಡೆಗೆ ಬರುವ ಹಾಗಿಲ್ಲ, ಯಾರಾದರೂ ಆ ಕಡೆಯವರು ಸತ್ತು ಹೋದರೆ ಈ ಕಡೆಯವರು ಬಾಯಿ ಬಡಿದುಕೊಳ್ಳಬೇಕು. ಹಿಂದೆ ತಾವು ಮಂತ್ರಿಗಳಾಗಿದ್ದಾಗ ಬಂದು ನೋಡಿ ಅಲ್ಲಿ ಸೇತುವೆಯ ಅವಶ್ಯಕತೆ ಇದೆ ಎಂದು ಹೇಳಿದ್ದಿರಿ. ತಮಗೆ ಈಗ ಪುನರ್ ಜನ್ಮದೊರೆತಿದೆ, ಈ ಸಮಯದಲ್ಲಾದರೂ ಇದನ್ನು ಪರಿಶೀಲನೆ ಮಾಡಿ. ಆದಷ್ಟು ಬೇಗ ಈ ಸೇತುವೆಯನ್ನು ಮಾಡಿಸಿ ಕೊಡಿ. ಹಣಕಾಸಿನ ಪರಿಸ್ಥಿತಿ ಉತ್ತಮವಾಗುವುದು ಯಾವಾಗ? ತಮ್ಮ ಕೈಲಾದಲ್ಲಿ ಮಾಡಿಸಿದರೆ ಚೆನ್ನಬಸಪ್ಪನವರ ಸೇತುವೆ ಎಂದು ನೆನರು ಇಡುವುದಕ್ಕೆ ನನಗೆ ಆಸೆ ಇದೆ. ಅಲ್ಲಿ ಒಂದು

ಸೇತುವೆಯ ಅವಶ್ಯಕತೆ ಇದೆ ಎನ್ನುವುದನ್ನು ಸರ್ಕಾರ ಆಗಲೇ ಒಪ್ಪಿಕೊಂಡಿದೆ. ಅಧಿಕಾರಿಗಳ ಬಗ್ಗೆ ಹೇಳುವುದಕ್ಕೆ ಬಂದರೆ, ಅಧಿಕಾರಿಗಳ ವಿಷಯದಲ್ಲಿ ನನ್ನ ಬಳಿ ಬರಬೇಡಿ, ನಿಮ್ಮ ಕ್ಷೇತ್ರದ ವಿಷಯ ಇದ್ದರೆ ಮಾತ್ರ ಬನ್ನಿ ಎಂದು ತಾವು ಹೇಳುತ್ತೀರಿ. ಇದು ತಂದರೆ ಈ ರೀತಿ ಹೇಳುತ್ತಿರಿ. ತಮ್ಮ ಪುನರ್‌ಜನ್ಮದ ಅವಧಿಯಲ್ಲಿ ಇದನ್ನು ಮಾಡಿಸಿ, ತಮ್ಮ ಹೆಸರು ಇಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಲ್ಲಿ ಸೇತುವೆಯ ಅವಶ್ಯಕತೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದುವರೆಗೂ ಬ್ಯಾನ್ ಆರ್ಡರ್ ಇತ್ತು. ಆದ್ದರಿಂದ ತೆಗೆದು ಕೊಳ್ಳಲಿಕ್ಕೆ ಆಗಲಿಲ್ಲ. ಈ ಬಗ್ಗೆ ಅಂದಾಜು ತಯಾರು ಮಾಡಿಸಿ, ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಹನುಮೇಗೌಡ.—15 ದಿವಸದ ಹಿಂದೆ, ಸರ್ಕಾರದ ಹುಕುಂ ಅನ್ವಯ ಎಲ್ಲಾ ಎಕ್ಸಿಕ್ಯುಟೀವ್ ಇಂಜಿನಿಯರುಗಳಿಗೂ ಕಳುಹಿಸಿ, ರೋಡ್ ವರ್ಕ್ಸ್, ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟುವ ಕೆಲಸವನ್ನು ತಕ್ಷಣ ನಿಲ್ಲಿಸಬೇಕು ಎಂದು ತಿಳಿಸಿರುವುದು ನಿಜವೇ ! ಎಕಾನಮಿ ಮೆಜರ್ಸ್ ಹೋದ ಮೊದಲು ಈ ರೀತಿ ಆರ್ಡರ್ ಕಳುಹಿಸುವುದಕ್ಕೆ ಕಾರಣ ಏನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ರೀತಿ ಆರ್ಡರ್ ಕೊಟ್ಟಿಲ್ಲ, ಆರ್ಡರ್ ಕೊಟ್ಟಿರಿತಕ್ಕ ಉದ್ದೇಶ ಇಷ್ಟು, ಬ್ಯಾನ್ ಆರ್ಡರ್ ತೆಗೆದಿದ್ದೇವೆ, ಬಡ್ಜೆಟ್ಟಿನಲ್ಲಿರತಕ್ಕ ಕೆಲಸಗಳನ್ನು ಪ್ರಾರಂಭ ಮಾಡಬೇಕು ಮತ್ತು ಯಾವ ಯಾವುದು ಅವರ ಅಧಿಕಾರ ವ್ಯಾಪ್ತಿಗೆ ಒಳಗಿದೆ ಮತ್ತು ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದೆ, ಅದನ್ನು ಸರ್ಕಾರದ ಅನುಮತಿ ತೆಗೆದುಕೊಂಡು ಮಾಡಬೇಕು ಎಂದು ಹೇಳಿದೆ.

ಶ್ರೀ ಗಟ್ಟಿ ಚಂದ್ರಶೇಖರ್.—ತಮ್ಮ ಹೆಸರಿನಲ್ಲಿ ಕಲ್ಲು ತಯಾರಿಸಬೇಕಾಗಿದೆ ಎಷ್ಟು ದಿವಸದಲ್ಲಿ ಈ ಸೇತುವೆಯನ್ನು ಮಾಡಿಕೊಡುತ್ತೀರೆಂದು ಹೇಳಿದರೆ ನಮ್ಮ ಕ್ಷೇತ್ರದ ಜನಕ್ಕೆ ಒಂದು ಸಮಾಧಾನ ಹೇಳುವುದಕ್ಕೆ ಮಾರ್ಗವಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕೆಲಸದ ಪ್ರಮಾಣ ನೋಡಿಕೊಂಡು ಎಷ್ಟು ಕಡಿಮೆ ಕಾಲದಲ್ಲಿ ಮಾಡಬಹುದೋ ಅಷ್ಟು ಕಡಿಮೆ ಕಾಲದಲ್ಲಿ ಮಾಡಿಕೊಡುತ್ತೇನೆ.

Providing Electricity Facilities to the Villages in Shiralkoppa Division

672. **Sri K. YENKATAPPA** (Shikaripur).—

Will the Minister for Public Works and Electricity be pleased to state :—

(*a*) the number of villages wherein no electricity facilities are provided in Shiralkoppa Division ;

(*b*) when these villages will be provided with the said facility ;

(*c*) whether the Government have received representations from this Division ;

(*d*) when the programmes will be completed ;

(*e*) reasons for the delay in the matter so far ?

Sri H. M. CHANNABASAPPA (Minister for Public Works and Electricity).—

(*a*) 29 in Shiralkoppa Assembly Constituency.